1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.

## ಕ್ರಿ ಮೊ ಸಂಖ್ಯೆ 1259/2023

ಪಿರ್ಯಾದಿ ः ರಾಜ್ಯದ ಪರವಾಗಿ ಲಿಂಗದಹಳ್ಳಿ ಪೊಲೀಸರು

- ವಿರುದ್ಧ -

ಆರೋಪಿ/ತರುः

1) ಶಿವಕುಮಾರ ಬಿನ್ ಮುರುಗಯ್ಯ, 55 ವರ್ಷ,
2) ಚಂದಮೂರ್ತಿ ಬಿನ್ ಚಿಕ್ಕಹನುಮಯ್ಯ, 54 ವರ್ಷ,
3) ಕಾಂತರಾಜ್ ಬಿನ್ ಲೋಕೇಶ, 28 ವರ್ಷ,
4) ನರಸಿಂಹ ಬಿನ್ ನರಸಪ್ಪ, 30 ವರ್ಷ,
5) ಆಶಾರಾಣಿ ಬಿನ್ ಶಿವಕುಮಾರ, 28 ವರ್ಷ,
6) ಸಾಕಮ್ಮ ಬಿನ್ ಲೋಕೇಶ, 43 ವರ್ಷ,
7) ಹೊನ್ನಮ್ಮ ಕೋಂ ಚಂದಮೂರ್ತಿ, 53 ವರ್ಷ,
8) ನಾಗಮ್ಮ ಕೋಂ ನಾಗಯ್ಯ, 49 ವರ್ಷ,
9) ರೇಖಾ ಕೋಂ ನಾರಾಯಣ, 26 ವರ್ಷ,
10) ನಾಗರಾಜ ಬಿನ್ ಹನುಮ, 55 ವರ್ಷ,

ಎಲ್ಲರೂ ವ್ಯವಸಾಯಗಾರರು, ವಾಸः ನಂದಿ ಗ್ರಾಮ, ಲಿಂಗದಹಳ್ಳಿ ಹೋಬಳಿ, ತರೀಕೆರೆ ತಾಲ್ಲೂಕು.

---

## -ःದೋಷಾರೋಪಣೆः-

ಶ್ರೀಮತಿ ಉರ್ಮಿಳ.ವಿ., ಬಿ.ಎ.ಎಲ್, ಎಲ್.ಎಲ್.ಬಿ., 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ ಆದ ನಾನು ನಿಮ್ಮ ವಿರುದ್ಧ ಮಾಡುವ ದೋಷಾರೋಪಣೆಗಳೇನೆಂದರೆः-

ದಿನಾಂಕ 25.01.2022 ರಂದು ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ಲಿಂಗದಹಳ್ಳಿ ಪೊಲೀಸ್ ಠಾಣಾ ಸರಹದ್ದಿನ ನಂದಿ ಗ್ರಾಮದ ಸರ್ವೆ ನಂ.90 ರಲ್ಲಿರುವ ರಾಜ್ಯ ಅರಣ್ಯ ಪ್ರದೇಶದಲ್ಲಿ ಬೆಳೆದಿರುವ ಗಿಡಗಳನ್ನು ಕಡಿಯುತ್ತಿರುವ ಮಾಹಿತಿ ಮೇರೆಗೆ ಚಾಸಾ-7 ಸತೀಶ್ ಪೂಜಾರಿ ವಲಯ ಅರಣ್ಯಾಧಿಕಾರಿಗಳು ಸಿಬ್ಬಂದಿಯವರಾದ ಚಾಸಾ-1 ಚನ್ನೇಗೌಡ ಡಿ.ಆರ್.ಎಫ್.ಒ., ಚಾಸಾ-4 ನಾಗರಾಜನಾಯ್ಕ ಅರಣ್ಯ ಕ್ಷೇಮಾಭಿವೃದ್ಧಿ ನೌಕರ, ಚಾಸಾ-5 ದೇವಪ್ಪ ಅರಣ್ಯ ರಕ್ಷಕರು ಮತ್ತು ಚಾಸಾ-6 ವಿನಯ್ಯ, ಅರಣ್ಯ ರಕ್ಷಕರು ಇವರಿಗೆ ಸದರಿ

ಸ್ಥಳಕ್ಕೆ ಹೋಗಿ ಗಿಡ ಕಡಿಯುವುದನ್ನು ನಿಲ್ಲಿಸುವಂತೆ ಸೂಚನೆ ನೀಡಿದ್ದರ ಮೇರೆಗೆ ಸದರಿಯವರು ಬೆಳಿಗ್ಗೆ 11.00 ಗಂಟೆಗೆ ಹೋಗಿ ನೋಡಿದಾಗ, ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಸದರಿ ಜಾಗದಲ್ಲಿ ಬೆಳೆದಿದ್ದ ನೀಲಗಿರಿ ಹಾಗೂ ಜಾಲಿಯ ಗಿಡಗಳನ್ನು ಕಡಿಯುತ್ತಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 143 ರ ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಎರಡನೇಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಬಂದು ದೊಂಬಿ ಮಾಡಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 147 ರ ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಮೂರನೇಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಸದರಿ ಜಾಗದಲ್ಲಿ ಬೆಳೆದಿದ್ದ ನೀಲಗಿರಿ ಹಾಗೂ ಜಾಲಿಯ ಗಿಡಗಳನ್ನು ಕಡಿಯುತ್ತಿದ್ದಾಗ, ಚಾಸಾ-1, 4 ರಿಂದ 6 ರವರು ಸದರಿ ಸ್ಥಳದಲ್ಲಿದ್ದ ಗಿಡಗಳನ್ನು ಕಡಿಯಬೇಡಿರೆಂದು ಹೇಳಿದಾಗ ಆರೋಪಿತರಾದ ನೀವು ಚಾಸಾ-1, 4 ರಿಂದ 6 ರವರಿಗೆ ಸೂಳೇಮಕ್ಕಳಾ, ಇದೇನು ನಿಮ್ಮಪ್ಪನ ಜಾಗನ ಎಂದು ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 504 ರ ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ನಾಲ್ಕನೇಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು 1 ನೇ ಆರೋಪಿಯಾದ ನೀವು ಚಾಸಾ-4 ರವರಿಗೆ ದೊಣ್ಣೆಯಿಂದ ಎಡಕಾಲಿನ ಹೆಬ್ಬೆರಳು, ಎದೆ ಮತ್ತು ಬೆನ್ನಿಗೆ ಹೊಡೆದು, 3 ನೇ ಆರೋಪಿಯಾದ ನೀವು ಚಾಸಾ-6 ರವರಿಗೆ ಕಲ್ಲಿನಿಂದ ಬಲಕಾಲಿನ ಮಂಡಿಗೆ ಹೊಡೆದು, ಚಾಸಾ-4 ಮತ್ತು 6 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 324 ರ ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಐದನೇಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಬಂದು 2 ನೇ ಆರೋಪಿಯಾದ ನೀವು ಚಾಸಾ-1 ರವರ ಸಮವಸ್ತ್ರ ಹಿಡಿದು ಎಳೆದಾಡಿ ತಳ್ಳಾಡಿದ್ದು, 1 ನೇ ಆರೋಪಿಯಾದ ನೀವು ಚಾಸಾ-5 ರವರನ್ನು ತಳ್ಳಿ ಕೆಳಗೆ ಬೀಳಿಸಿ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ

ಸಂಹಿತೆ ಕಲಂ 323 ರ ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಕೊನೆಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಬಂದು, ಚಾಸಾ-1, 4 ರಿಂದ 6 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಅವರ ಮೇಲೆ ಹಲ್ಲೆ ಮಾಡಿ ಸರ್ಕಾರಿ ಕರ್ತವ್ಯ ನಿರ್ವಹಿಸದಂತೆ ಅಡ್ಡಿ ಪಡಿಸಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 353 ರ ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ನೀವು ಸದರಿ ಆರೋಪದ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕುದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ ಃ 03.03.2026

ಸಹಿ

**(**ಉರ್ಮಿಳ**.**ವಿ**)**
**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ**.**ದ**.**ನ್ಯಾ**.**ದಂ**.,** ತರೀಕೆರೆ**.**